ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು)—ಗಿರ್ಸಿಗರ ಜನಗಣತಿಯ ಅಂಕಿಅಂಶದಂತೆ ಜಲಸೂರಿನ ಗ್ರಾಮವು ೪,೬೩೭ ಜನಸಂಖ್ಯೆ ಹೊಂದಿದೆ. ಈ ಗ್ರಾಮವು ಮೈಸೂರು—ವಂಗಳೂರು ರಾಜ್ಯ ಹೆದ್ದಾರಿಯಲ್ಲಿ ಸುಳ್ಯದಿಂದ ೯.೫ ಕಿ.ಮಿ.ಗಳ ಅಂತರದಲ್ಲಿಯೂ ಹಾಗೂ ಪುತ್ತೂರಿನಿಂದ ೨೭.೩ ಕಿ.ಮಿ.ಗಳ ಅಂತರದಲ್ಲಿಯೂ ಇದೆ. ಪ್ರಸ್ತುತ ಈ ಗ್ರಾಮದಲ್ಲಿ ಧರ್ಮಸ್ಥಳ, ವಂಗಳೂರು, ವಿಡಿಕೇರಿ, ಮೈಸೂರು, ಕಾಸರಗೋಡು ಮುಂತಾದ ಕಡೆಗಳಿಂದ ಬರುವ ೧೪ ವೇಗದೂತ-ತಡೆರಹಿತ ಸಾರಿಗೆಗಳೂ ಸೇರಿ ಒಟ್ಟು ೫೨ ಸಾರಿಗೆಗಳು ನಿಂತು ಹೋಗುತ್ತಿದ್ದು, ಜಲಸೂರಿನ ಸಾರಿಗೆ ಬೇಡಿಕೆಯನ್ನು ಸಮರ್ಥವಾಗಿ ಪೂರೈಸುತ್ತಿವೆ. ಇದರಿಂದಾಗಿ ಜಲಸೂರಿನ ಜನತೆಯು ಯಾವುದೇ ತೊಂದರೆ ಇಲ್ಲದೆ ಬೆಳಿಗ್ಗೆ ೬-೦೦ ಗಂಟೆಯಿಂದ ರಾತ್ರಿ ೧೦-೮೦ ಗಂಟೆಯವರೆಗೂ ಬಸ್ಸುಗಳ ಉಪಯೋಗ ಪಡೆಯಬಹುದಾಗಿದೆ. ಹೆಚ್ಚಿನ ತಡೆರಹಿತ-ವೇಗದೂತ ಸಾರಿಗೆಗಳಿಗೆ ಜಲಸೂರಿನಲ್ಲಿ ಕೊಂಡಿಕೆ ನಿಲುಗಡೆ ನೀಡಿದ್ದೇ ಆದರೆ ನೇರ ಪ್ರಯಾಣಿಕರಿಗೆ ಕಿರಿಕಿರಿಯಾಗುವುದರಿಂದ ಹೆಚ್ಚಿನ ತಡೆರಹಿತ-ವೇಗದೂತ ಸಾರಿಗೆಗಳಿಗೆ ಜಲಸೂರಿನಲ್ಲಿ ನಿಲುಗಡೆ ನೀಡುವುದು ಸಮಂಜಸವಲ್ಲವೆಂದು ಈ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಕೆ. ಕಂಠಾಲ.—ಅಧ್ಯಕ್ಷರೇ, ಅಲ್ಲಿ ಯಾವ ಬಸ್‌ನ್ನೂ ಕೂಡ ನಿಲುಗಡೆ ಮಾಡುವುದಿಲ್ಲ. ತಪಾಸಣೆ ಗೇಟ್ ಇರುವುದರಿಂದ ಕೆಲವೊಮ್ಮೆ ನಿಲ್ಲುತ್ತವೆ ಅಷ್ಟೆ.

ಅಧ್ಯಕ್ಷರು.— ಹಿಳಿರ ಕೆಳಗೆ ತಾವು ಚರ್ಚೆ ಮಾಡುವಂತಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

(೧೨) ಸಂಕೇಶ್ವರ ಮತಕ್ಷೇತ್ರದ ದಡ್ಡಿನಾಗನೂರು ಏತ ನೀರಾವರಿ ಯೋಜನೆಯನ್ನು ಸಂಪೂರ್ಣ ಮಾಡಲಂ ಒತ್ತಾಯ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಂಕೇಶ್ವರ ಮತಕ್ಷೇತ್ರದ ದಡ್ಡಿನಾಗನೂರು ಏತ ನೀರಾವರಿ ಹಾಗೂ ಸಲಾಮ್‌ವಾಡಿ ಏತ ನೀರಾವರಿ ಸರಕಾರದಿಂದ ಪೂರ್ತಿ ಮಾಡುವಂತೆ ವಿನವಿ ಸಮಿತಿಯವರು ಶಿಫಾರಸ್ಸು ಮಾಡಿದ್ದರೂ ಇಲ್ಲಿಯವರೆಗೆ ಈ ವಿಷಯದಲ್ಲಿ ಸರಕಾರ ನಿರ್ಲಕ್ಷ್ಯ ಮಾಡುತ್ತಿರುವುದು ದುರದೃಷ್ಟಕರ. ಘಟಪ್ರಭಾ ಯೋಜನೆಯ ಅಡಿಯಲ್ಲಿ ಬರುವ ಪುನರ್ವಸತಿ ಕೇಂದ್ರಗಳಿಗೆ ದಡ್ಡಿನಾಗನೂರ್ ಏತ ನೀರಾವರಿ ಮಾಡಿಕೊಡುವುದಾಗಿ ದಿವಂಗತ ದೇವರಾಜ್ ಅರಸರು ಮುಖ್ಯಮಂತ್ರಿಗಳಿದ್ದಾಗ ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿ ಆಶ್ವಾಸನೆ ಕೊಟ್ಟಿದ್ದು ಹಾಗೂ ಸಲಾಮ್‌ವಾಡಿ ಏತ ನೀರಾವರಿಯನ್ನು ಪೂರ್ತಿ ಮಾಡಿಕೊಡುವುದಾಗಿ ಭರವಸೆ ಇಟ್ಟು ಜನರ ಬೇಡಿಕೆಗೆ ಬೆಲೆ ಕೊಟ್ಟರುತ್ತಾರೆ. ಆದರೆ ಇಲ್ಲಿಯವರೆಗೆ ಈ ಕೆಲಸವು ಪೂರ್ತಿಗೊಂಡಿಲ್ಲ. ವಿನವಿ ಸಮಿತಿಯಂ ಅಧ್ಯಕ್ಷರು ಹಾಗೂ ಸದಸ್ಯರು ಸ್ಥಳಕ್ಕೆ ಭೇಟಿ ಕೊಟ್ಟು ಜನರ ತೊಂದರೆಯನ್ನು ಅರಿತುಕೊಂಡಿರುತ್ತಾರೆ. ಈ ವಿಷಯದಲ್ಲಿ ಇಲಾಖೆಯ ಮೇಲ್ಮಟ್ಟದ ಅಧಿಕಾರಿಗಳ ನಿಯೋಗವನ್ನು ಕಳುಹಿಸಿ ಜನರಿಗಾಗುತ್ತಿರುವ ತೊಂದರೆಯನ್ನು ಅವರಂ ಅರಿತುಕೊಳ್ಳುವುದು ಉಚಿತ. ಕಾರಣ ಈ ವಿಷಯದಲ್ಲಿ ಸರಕಾರದ ಹೇಳಿಕೆಯನ್ನು ಸದನದಲ್ಲಿ ಬಯಸುತ್ತೇನೆ.

ಶ್ರೀ ಕೆ. ಕೃಷ್ಣಮೂರ್ತಿ.—ಅಧ್ಯಕ್ಷರೇ, ನಾನು ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರನ್ನು ಸ್ಥಳಕ್ಕೆ ಎಂಟಂ ದಿವಸಗಳೊಳಗಾಗಿ ಭೇಟಿ ನೀಡುವಂತೆ ಹೇಳಿ ಏನು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

(೧೩) ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದ ಸುಬ್ರಹ್ಮಣ್ಯಂ ಎನ್ನುವವರ ಕೊಲೆಯಾಗಿರುವುದಂ

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಶೃಂಗೇರಿ ಕ್ಷೇತ್ರದ ಬಾಳೇಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿ ಸೀನಿಯರ್ ಲಯಸನ್ ಆಫೀಸರ್ ಆಗಿದ್ದ ಎಸ್. ಪಿ. ಸುಬ್ರಹ್ಮಣ್ಯಂ ಎಂಬು ವವರನ್ನು ಆಸ್ಸಾಂ ರಾಜ್ಯದಿಂದ ತರಬೇತಿ ಪಡೆಯಲು ಬಂದಿದ್ದ ದೇವಜ್ಯೋತಿ ಬರುವಾ ಎಂಬ ವಿದ್ಯಾರ್ಥಿ ದಿನಾಂಕ ೯-೧೧-೧೯೮೭ರಂದು ಚೂರಿಯಿಂದ ಇರಿದು ಕೊಲೆ ಮಾಡಿ ಪೋಲೀಸ್‌ರವರ